2. ಸದರೀ ತಾಲ್ಲೂಕಿನ ಅಮಲ್‌ದಾರ್‌ರು ಪ್ರತ್ಯೇಕ ಪ್ರತ್ಯೇಕ ನೋಟಿಸ್‌ಗಳು ಬಂದ ಮೇಲೆ ಅವುಗಳನ್ನ ತೆಗದುಕೊಳ್ಳುವ ಬಗ್ಯೆ ಸದರೀ ಇನಾಂದಾರ್‌ರು ಏರ್ಜ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕಿನ ಅಮಲ್‌ದಾರ್‌ರು ಅಂಥಾ ನೋಟಿಸ್‌ಗಳನ್ನ ದೇರ್‌ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ.

3. ಸದರೀ ಚಿಲ್ಲರೆ ಇನಾಂಗಳ ಬಗ್ಯೆ ಈ ಆಫಿಸಿನಿಂದ ಮೊದಲೇ ಕೊಡಲ್ಪಟ್ಟ ಹಂಗಾವಿುಪಟ್ಟಿಗಳು ರದ್ದುಮಾಡಲ್ಪಟ್ಟು ಇರುತ್ತೆಂದು ಇದರ ಪೆಸೆಯಿಂದ ಪ್ರಕಟಿಸಲ್ಪಟ್ಟಿ ಯಿರುತ್ತೆ.

ಜೆ. ಪಿ. ಗ್ರಾಂಟ್,
ಸೂಪರಿಂಟೆಂಡೆಂಟ್ ಆಫ್ ಇನಾಂ ಸೆಟ್ಲ ಮೆಂಟ್ಸ್.

---

## ನಂದೀದುರ್ಗದ ಡಿವಿಜ್ಯ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ ೧೮೯೫—೯೬ನೇ ಇಸವಿ ಮಿನಲೇನಿಯಸ್ ಅರ್ಜೀ ನಂಬರ್ 443.

ಮೃತಪಟ್ಟ ಸಿ. ವಿ. ಕೃಷ್ಣಸಾಮಿಕಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್‌ರು ಬೆಂಗಳೂರ್ ಸಿವಿಲ್ ಅಂಡ್ ಮಿಲಿಟೆರಿ ಸ್ಟೇರ್ಷ್ ಲಕ್ಷ್ಮಣವೊದಲಿಯಾರ್‌ರ ಬೀದಿಯಲ್ಲಿರುವ ಸಿ. ವಿ. ಮುನಿಸಾಮಿ ಕಟ್ಟಿಯು, ಮೃತಪಟ್ಟ ಸದರೀ ಸಿ. ವಿ. ಕೃಷ್ಣಸಾಮಿಕಟ್ಟರಿಗೆ ಅವಿಭಕ್ತ ಅಂಣನು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರ್ ಸಿವಿಲ್ ಅಂಡ್ ಮಿಲಿಟೆರಿ ಸ್ಟೇರ್ಷ್ ಸ್ಥಳದ ಸಿ. ವಿ. ಮುನಿಸಾಮಿಕಟ್ಟಿಯು, ಸಿವಿಲ್ ಅಂಡ್ ಮಿಲಿಟೆರಿ ಸ್ಟೇರ್ಷ್ ಲಕ್ಷ್ಮಣವೊದಲಿಯಾರ್‌ರ ಬೀದಿಯ ವಾಸಸ್ಥರಾಗಿ ಮೃತಪಟ್ಟ ಸಿ. ವಿ. ಕೃಷ್ಣಸಾಮಿಕಟ್ಟರ ಜೆಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸಿ. ವಿ. ಮುನಿಸಾಮಿಕಟ್ಟರ ಅರ್ಜಿಯನ್ನು 1896ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖು 22ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಕೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಿ. ವಿ. ಕೃಷ್ಣಸಾಮಿಕಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1896ನೇ ಇಸವಿ ಆಗಸ್ಟ್ ತಿಂಗಳ 28ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಿಶಿ ನಮ್ಮ ದಸ್ತಖತ್ತೊಷನೆ ಕೊಡೋಣಾಗಿದೆ.

ಟಿ. ನರಹರಿರಾವ್, ಡಿಸ್ಟ್ರಿಕ್ಟ್ ಜಡ್ಜ್.

---

## ಫಾರೆಸ್ಟ್ ಇಲಾಖಾ.

### ಇಸ್ತಿಹಾರ್.

ತಾರೀಖು 2ನೇ ಸೆಪ್ಟಂಬರ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವಬೇನಂದರೆ,—ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲಿಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಸ್ಥಳಗಳಲ್ಲಿ ಅವುಗಳ ಪಕ್ಕದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಅಯಾ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರವರು ಮತ್ತು ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವುವು.

| ಡಿಸ್ಟ್ರಿಕ್ಟು. | ಕೋಠಿ ಹೆಸರು. | ಹರಾಜು ತಾರೀಖು. |
|---|---|---|
| ಮೈಸೂರು | ಹುಣಸೂರು | 28ನೇ ನವೆಂಬರ್ 1896. |
| ಡಿಟೋ | ಶ್ರೀರಂಗಪಟ್ಟಣ | 1ನೇ ಡಿಸೆಂಬರ್ ,, |
| ಬೆಂಗಳೂರು | ಬೆಂಗಳೂರು | 4ನೇ ಡಿಟೋ ,, |
| ಹಾಸನ | ಹಾಸನ | 7ನೇ ಡಿಟೋ ,, |
| ಕಡೂರು | ಚಿಕ್ಕಮಗಳೂರು | 10ನೇ ಡಿಟೋ ,, |
| ಶಿವಮೊಗ್ಗಾ | ಶಿವಮೊಗ್ಗಾ | 15ನೇ ಡಿಟೋ ,, |
| ಡಿಟೋ | ಸಾಗರ | 18ನೇ ಡಿಟೋ ,, |
| ಡಿಟೋ | ತೀರ್ಥಹಳ್ಳಿ | 22ನೇ ಡಿಟೋ ,, |

2. ಈ ವರುಷ (i) ಬೆಂಗಳೂರು, ಹಾಸನ, ಕಡೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹಳೇ ತರಹೆ ಪ್ರಕಾರವೂ (ii) ಆಜಮಾಯಿಷಿ ಬಗ್ಯೆ ಮೈಸೂರು ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹೊಸ ಯಾ ಬೊಂಬಾಯಿ ತರಹೆ ಪ್ರಕಾರವೂ ಯರಡು ವಿಧವಾಗಿ ಸಂದೆಲನ್ನ ರಾಸು ಮಾಡಿಸಿರುತ್ತೆ.

3. ಇದುವರಿವಿಗೂ ಜಾರಿಯಲ್ಲಿರುವ ವಜನಿ ಬಟ್ಟುಗಳೇ ಈಗಲೂ ಉಪಯೋಗಿಸಲ್ಪಡುವುವು.

4. ಪ್ರತಿ ಕೋಠಿಯಲ್ಲಿಯೂ ಬಿಕ್ರಿ ಬಗ್ಯೆ ವೆದಗಿಸಲ್ಪಡುವ ಸಂದಲಿನ ತರಹೆಗಳ ವೊತ್ತವನ್ನ ಇದರಡಿ ವಿವರಿಸಿದೆ.